ಒಂದು ಪ್ರಾಧ್ಯಾಪಕರು, 7 ಉಪನ್ಯಾಸಕರು ಸಿಬ್ಬಂದಿ ಮತ್ತು ವಿದ್ಯಾರ್ಥಿ ಪ್ರಮಾಣವು 1:60 ರಂತೆ ಹಾಗೂ ಪ್ರಾಯೋಗಿಕ ತರಗತಿಗೆ 1:30ರಂತೆ ಇರಬೇಕು.

(ಬಿ) ಬಿ.ಫಾರ್ಮ ಕೋರ್ಸಿಗೆ.

	ಪ್ರಾ.	ಸ.ಪ್ರಾ.	ಉ
ಪ್ರತಿ 40 ವಿದ್ಯಾರ್ಥಿಗಳಿಗೆ	1	1	2
ಪ್ರತಿ 60 ವಿದ್ಯಾರ್ಥಿಗಳಿಗೆ	1	1	3

ಉ: ಉಪನ್ಯಾಸಕರು

ಸ.ಪ್ರ: ಸಹಾಯಕ ಪ್ರಧ್ಯಾಪಕರು

ಪ್ರ : ಪ್ರಧ್ಯಾಪಕರು

ವಿಷಯ:- ಕರ್ನಾಟಕ ಸರ್ಕಾರದ ಖಾಸಗಿ ಮತ್ತು ಸರ್ಕಾರಿ ವೈದ್ಯಕೀಯ ಕಾಲೇಜುಗಳ ವಿಷಯ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 284(216)

ಶ್ರೀ ಎಂ.ಹೆಚ್.ಜಯಪ್ರಕಾಶ್ ನಾರಾಯಣ್ (ಯಲಹಂಕ):- ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ರಾಜ್ಯದಲ್ಲಿರುವ ಸರ್ಕಾರಿ ಮತ್ತು ಖಾಸಗಿ ವೈದ್ಯಕೀಯ ಶಿಕ್ಷಣ ಕಾಲೇಜು, ದಂತ ವೈದ್ಯಕೀಯ ಕಾಲೇಜು, ಫಾರ್ಮಸಿ ಕಾಲೇಜು, ನರ್ಸಿಂಗ್ ಕಾಲೇಜುಗಳೆಷ್ಟು?

ಆ) ಈ ಕಾಲೇಜುಗಳಲ್ಲಿ ಅಧಿಕೃತವಾಗಿ ಸರ್ಕಾರದಿಂದ ಮಂಜೂರಾಗಿರುವ ದಾಖಲಾಗಿರುವ ವಿದ್ಯಾರ್ಥಿಗಳ ಸಂಖ್ಯೆಯೆಷ್ಟು ಈ ದಾಖಲಾತಿ ಸಂಖ್ಯೆಗಿಂತ ಹೆಚ್ಚುವರಿ ದಾಖಲಾತಿಯನ್ನು ಮಾಡಿಕೊಂಡಿರುವ ಸಂಖ್ಯೆಗಳಾವುವು (ಅವುಗಳ ಪೂರ್ಣ ವಿವರಗಳನ್ನು ಒದಗಿಸುವುದು)

ಇ) ಈ ರೀತಿ ಮಾಡಿಕೊಂಡಿರುವ ಹೆಚ್ಚುವರಿ ದಾಖಲಾತಿಗಳನ್ನು ಕ್ರಮಗೊಳಿಸಲು ಸರ್ಕಾರದವರು ಕೈಗೊಂಡ ಕ್ರಮಗಳೇನು?

ಈ) ಪ್ರತಿ ಕಾಲೇಜಿನಲ್ಲಿ ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡದ ದಾಖಲಾತಿ ಪ್ರಮಾಣವೆಷ್ಟು?

ಶ್ರೀ ಎ.ಬಿ.ಪಾಟೀಲ್(ವೈದ್ಯಕೀಯ ಶಿಕ್ಷಣ ಸಚಿವರು):-

ಅ)	ಸರ್ಕಾರಿ	ಖಾಸಗಿ
ವೈದ್ಯಕೀಯ ಕಾಲೇಜುಗಳು	4	15
ದಂತ ಕಾಲೇಜುಗಳು	1	39
ಫಾರ್ಮಸಿ ಕಾಲೇಜುಗಳು	1	47
ನರ್ಸಿಂಗ್ ಕಾಲೇಜುಗಳು	1	20

ಆ) ಅಧಿಕೃತವಾಗಿ ಮಂಜೂರಾಗಿರುವ ಸೀಟುಗಳು(ರಾಜ್ಯದಲ್ಲಿ)

ವೈದ್ಯಕೀಯ	3495
ದಂತ	2231
ನರ್ಸಿಂಗ್	630
ಫಾರ್ಮಸಿ	1130

1993-94ನೇ ಸಾಲಿನಲ್ಲಿ ಈ ಕೆಳಕಂಡ ಕಾಲೇಜುಗಳು ಹೆಚ್ಚುವರಿ ಪ್ರವೇಶ ಮಾಡಿದೆ.

ವೈದ್ಯಕೀಯ ಕಾಲೇಜುಗಳು ಹೆಚ್ಚುವರಿ ಪ್ರವೇಶ ಸಂಖ್ಯೆ

1) ಜೆಎನ್ಎಂ.ವೈ.ಕಾ.ಬೆಳಗಾಂ	12
2) ಜೆಜೆಎಂಸಿ. ದಾವಣಗೆರೆ	15
3) ಎಂಆರ್ಎಂಸಿ.ಗುಲ್ಬರ್ಗಾ	39
4) ಸಿದ್ದಾರ್ಥ ವೈ.ಕಾ.ತುಮಕೂರು	5
5) ಜೆಎಸ್ಎಸ್.ವೈ.ಕಾ.ಮೈಸೂರು	32
6) ಎಂ.ಎಸ್.ರಾಮಯ್ಯ ವೈ.ಕಾ.ಬೆಂಗಳೂರು	62

ದಂತ ಕಾಲೇಜುಗಳು

1.ಫರುಕಿಯ ದಂತ ಕಾಲೇಜು, ಮೈಸೂರು	3
2.ಕೃಷ್ಣದೇವರಾಯ ದಂತ ಕಾ.ಬೆಂ.	1
3.ಪಿ.ಸಿ.ದಂತ ಕಾಲೇಜು, ಬೆಂಗಳೂರು	70
4.ಎಂ.ಎಸ್.ರಾಮಯ್ಯ ದಂತ ಕಾ.ಬೆಂ.	1
5.ಬೆಂಗಳೂರು ಇನ್ಸ್ಟ್ಯೂಟ್ ಆಫ್ ಡೆಂಟಲ್ ಸೈನ್ಸಸ್ ಬೆಂಗಳೂರು	1

ಫಾರ್ಮಸಿ ಕಾಲೇಜುಗಳು

1. ಜೆ.ಎಸ್.ಎಸ್.ಫಾ.ಕಾ.ಮೈಸೂರು 6

1994-95 ಸಾಲಿಗೆ ಖಾಸಗಿ ಸಂಸ್ಥೆಗಳು ಹೆಚ್ಚುವರಿ ಪ್ರವೇಶ ಮಾಡಿರುವ ಬಗ್ಗೆ ನಿರ್ದೇಶಕರು ವೈದ್ಯಕೀಯ ಶಿಕ್ಷಣ, ಇವರಿಗೆ ಮಾಹಿತಿಯನ್ನು ಇನ್ನೂ ಸಲ್ಲಿಸುತ್ತಿದ್ದಾರೆ. ಪೂರ್ಣ ಮಾಹಿತಿ ಬಂದ ನಂತರ, ಹೆಚ್ಚುವರಿ ದಾಖಲಾತಿಯ ಬಗ್ಗೆ ಸ್ಪಷ್ಟವಾದ ಚಿತ್ರ ಗೊತ್ತಾಗುತ್ತದೆ.

ಇ) ಮಾನ್ಯ ಸರ್ವೋಚ್ಚ ನ್ಯಾಯಾಲಯವು ಶ್ರೀ ಉನ್ನಿಕೃಷ್ಣನ್ ಪ್ರಕರಣದಲ್ಲಿ ನೀಡಿದ ತೀರ್ಪಿನ ಪ್ರಕಾರ ಯಾವುದೇ ಸಂಸ್ಥೆಗಳು ಮಾಡಿರುವ ಹೆಚ್ಚುವರಿ ಪ್ರವೇಶವನ್ನು ನ್ಯಾಯಾಲಯದ ಆದೇಶವನ್ನು ಹೊರತುಪಡಿಸಿ ಕ್ರಮಬದ್ಧಗೊಳಿಸಲು ಅವಕಾಶ ಇರುವುದಿಲ್ಲ.

ಈ) ಎಸ್.ಸಿ. ಶೇಕಡ 15 ಉಚಿತ ಸೀಟುಗಳಲ್ಲಿರುವ
ಎಸ್.ಟಿ. ಶೇಕಡ 3 ಮೀಸಲಾತಿ ಪ್ರಮಾಣ.

ವಿಷಯ:- ರಾಜ್ಯದಲ್ಲಿ ಅನಕ್ಷರತೆಯನ್ನು ಹೋಗಲಾಡಿಸಲು ಸರ್ಕಾರ ಕೈಗೊಂಡಿರುವ ಕ್ರಮ.

ಚುಕ್ಕೆ ಗುರುತಿಲ್ಲ ಪ್ರಶ್ನೆ ಸಂಖ್ಯೆ: 285(122)

ಶ್ರೀ ಎಂ.ಹೆಚ್.ಜಯಪ್ರಕಾಶ್ ನಾರಾಯಣ್(ಯಲಹಂಕ) :- ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:

ಅ) ರಾಜ್ಯದಲ್ಲಿ 1991ನೇ ಜನಗಣತಿಯ ಪ್ರಕಾರ ಪ್ರಜಾಸಂಖ್ಯೆ ಎಷ್ಟು? ಅವುಗಳಲ್ಲಿ ಗಂಡಸು: ಹೆಂಗಸರ ಸಂಖ್ಯೆಗಳೆಷ್ಟು?